ನಿಮ್ಮನ್ನು ಬುದ್ಧಿಜೀವಿ ಅಂತಾರೆ. ನೀವು ಬಿದ್ದು ಬಿದ್ದು ನಗ್ತೀರಿ – ಏನು ಇವರೆಲ್ಲಾ ತಮಗೆ ಬುದ್ಧಿಯೇ ಇಲ್ಲ ಅಂತ ರಾಜಾರೋಷಾಗಿ ಹೇಳಿಕೊಳ್ತಾರಲ್ಲಾ... ಅಂತೀರಿ.''

''ನಿಜ ಸರ್... ನಿಮ್ಮ ಹೆಸರನ್ನು ಇನ್ನೂ ಹೇಳಿಲ್ಲ. ಬುದ್ಧಿ ಎಂಥ ಪವಿತ್ರ ಸಂಗತಿ! ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಎಂಬ ಒಂದು ಗಾದೆ ಮಾತಿದೆ, ನೋಡಿ. ಬುದ್ಧಿಯ ಮಹತ್ವ ಹೇಳುವ ಗಾದೆ ಅದು. ಬುದ್ಧಿ, ಶುದ್ಧಿ ಇಟ್ಟುಕೊಂಡೇ ಈ ದೇಶದ ಸಾಮಾನ್ಯ ಮನುಷ್ಯ ಬದುಕಿ ಬಂದಿದಾನೆ. ಅವನು ಸ್ವಾಮಿ ಬುದ್ಧಿ ಜೀವಿ. ಯಾರ ಮಾತಿನಿಂದಲೂ ವಿಚಲಿತನಾಗದೆ, ತನ್ನ ಸಣ್ಣ ಕುಟುಂಬವನ್ನು ಪ್ರೀತಿಯಿಂದ ಸಾಕಿ, ತನ್ನ ಪಾಲಿನ ಪುಟ್ಟ ಗದ್ದೆಯನ್ನು ಊಳಿ, ಬೆಳೆ ತೆಗೆದು, ತನ್ನ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಿ, ಗಂಡನಮನೆಯಲ್ಲಿ ಬದುಕಲು ಹೇಳಿಕೊಡ್ತಾನೆ(ಳೆ). ಗಂಡುಮಕ್ಕಳಿಗೆ ಗದ್ದೆಯಲ್ಲಿ ದುಡಿಯೋದನ್ನು ಹೇಳಿಕೊಡ್ತಾನೆ – ಯಾರ ಹಂಗಿಲ್ಲದೆ ಬಾಳುವ ಹಾದಿ ತೋರಿಸಿಕೊಡ್ತಾನೆ, ಅವನು ಬುದ್ಧಿಯಿಂದ ಬದುಕಿದಾನೆ, ಬುದ್ಧಿಜೀವಿ ಅವನು. ನನ್ನಂಥವರು ವಿಚಾರಗಳನ್ನು ಹೇಳುತ್ತಾ ಹೋಗ್ತೀವಿ...''

''ಈಗ ಅದೂ ಒಂದು ವ್ಯಾಪಾರದ ಸರಕಾಗಿದೆ'' ಮೊದಲ ವ್ಯಕ್ತಿಯ ಮಾತು ಕೂರಸಿಯಂತಿತ್ತು.

''ರೀ, ಯಾರ್ರೀ ನೀವು? ಏನು ಮಾತೂಂತ ಆಡ್ತಾ ಇದೀರ? ನನ್ನ ವಿಕಾರಗಳನ್ನು ನಾನು ಹೇಳಿಕೊಳ್ತಾ ಹೋಗ್ತೇನೆ. ಅದರಲ್ಲಿ ಏನು ದೋಷ ಕಾಣ್ತಾ ಇದೀರ?'' ಎರಡನೆಯ ವ್ಯಕ್ತಿ ರೇಗತೊಡಗಿತು.

''ಲೋಕಶಿಕ್ಷಕನಾಗಬೇಕು ಅನ್ನೋ ಹಂಬಲ ನಿಮ್ಮದು.'' ಮೊದಲವ್ಯಕ್ತಿ ಮಾತನಾಡತೊಡಗಿತು. ''ಬಹಳ ದೊಡ್ಡ ಆದರ್ಶ. ತಪ್ಪೇನಿದೆ? ಏನೂ ಇಲ್ಲ. ಸಮಾಜ ಹೇಗೆ ಹೋಗ್ತಾ ಇದೆ ನೋಡ್ತೀರಿ. ಹೇಗೆ ಹೋಗಬೇಕು ಅಂತ ಯೋಚಿಸ್ತೀರಿ. ಹೇಳ್ತೀರಿ. ತಪ್ಪೇನಿದೆ, ತಪ್ಪೇನಿದೆ ಅಂತ ಕೇಳ್ತೀರಿ. ನಾನು ಹೇಳ್ತೇನೆ, ತಪ್ಪಿದೆ. ಸಮಾಜ ಹೀಗೆ ಹೋಗಬೇಕು ಅನ್ನೋದಕ್ಕೆ ನೀವು ಯಾರ್ರೀ? ನಿಮ್ಮನ್ನು ಕೇಳಿ ಸಮಾಜ ಚಲಿಸುತ್ತದೆಯೇ? ಏನು, ಏನು ಮಾಡೋಕಾಯ್ತು ನೀವು? ಕಂಪ್ಯೂಟರು, ಸಾಫ್ಟ್‌ವೇರು ನಿಮ್ಮನ್ನು ಕೇಳಿಕೊಂಡು ಬಂತಾ? ನೀವು ಬೇಡಾಂದ್ರೆ ಓಡಿ ಹೋಯ್ತಾ? ಖಾಸಗೀಕರಣ ತಡೆಯೋಕಾಯ್ತೇನ್ರೀ ನಿಮಗೆ? ಹಳ್ಳಿಗಳನ್ನು ಹಾಳು ಮಾಡಿದಿರಿ. ನಗರಗಳಲ್ಲಿ ನರಕಗಳನ್ನು ಸೃಷ್ಟಿಸಿದಿರಿ. ತಡೆಯೋಕಾಯ್ತೇನ್ರೀ ನಿಮಗೆ? ಕನ್ನಡ, ಕನ್ನಡ ಅಂತೀರಿ. ಮಕ್ಕಳೆಲ್ಲಾ ಇಂಗ್ಲಿಷ್ ಭಾಷೆಯಲ್ಲಿ ಕಲಿತವು. ಕೃಷಿಭೂಮಿಯೆಲ್ಲಾ ಎನ್.ಎ. ಆಗಿ ಮಾಲುಗಳು ಎದ್ದು ನಿಂತಿವೆ. ನಿಮ್ಮೂರ ಬಡಶೆಟ್ಟಿಯ ಅಂಗಡಿ ಉಳಿಸೋಕಾಯ್ತಾ ನಿಮಗೆ? ರೈತರ ಮಕ್ಕಳು ಗದ್ದೆ ಮಾರಿ ಆಟೊ ತಕಂಡು ಬೆಂಗಳೂರು ರಸ್ತೇಲಿ ಬಿದ್ದಿದಾರೆ. ರಿಕ್ಷಾ ಮೇಲೆ 'ಮಾತಾ ಪಿತೃ ಕೃಪಾ' ಅಂತ ಬರೆಸಿಕೊಂಡು ಸಿಗ್ನಲ್‌ಗಳಲ್ಲಿ ಬೆವರ್ತಾ ನಿಂತಿದಾರೆ. ಊರಲ್ಲಿ ಗದ್ದೇಲಿ ಬೆವರಿದ್ರೆ ಕೃಷಿ ಆಗ್ತಿತ್ತು. ಕಾಣ್ತಾ ಇದ್ಯೆ ನಿಮಗೆ?''

''ಹೆಚ್ಚು ಕಡಿಮೆ ಇದೇ ಮಾತುಗಳನ್ನೇ ಅಲ್ಲವೆ, ನಾನು ಕೂಡ ಕೇಳೋದು'' ಎರಡನೆಯ ವ್ಯಕ್ತಿ ಆಶ್ಚರ್ಯದಿಂದ ಕೇಳಿತು.

''ಹೌದು, ಇವೇ ಮಾತುಗಳೇ'' ಮೊದಲ ವ್ಯಕ್ತಿ ಹೇಳಿತು. ''ಆದರೆ, ನಾನು ಕೇಳ್ತಾ ಇರೋದು, ಇದನ್ನೆಲ್ಲಾ ಥಿಯರಿ ಮಾಡೋದು ಬಿಟ್ಟರೆ ಇನ್ನೇನು ಮಾಡೋಕಾಯ್ತು ನಿಮಗೆ? ಲೋಕ ಶಿಕ್ಷಣ ಮಾಡೋಕೆ ಹೊರಟಿದೀರಲ್ಲ – ನಿಮ್ಮ ಹತ್ರ ಕಲಿಯೋರು ಯಾರು? ಯಾರಿಗೆ ಈ ಮಾತು ಹೇಳ್ತಾ ಇದೀರಿ? ನಿಮ್ಮನೇಲಿ ನಿಮ್ಮ ಮಕ್ಕಳು ಈ ಮಾತುಗಳನ್ನು ಕೇಳ್ತಾರಾ?''

''.....''

''ಕೇಳಲ್ಲ ಸರ್, ಅವರು ನಿಮ್ಮ ಮಾತುಗಳನ್ನು ಕೇಳೋದಿಲ್ಲ. ಕೇಳಿದರೂ ಅವರಿಗೆ ಅರ್ಥ ಆಗೋದಿಲ್ಲ. ಅವರ ಮಾತು ನಿಮಗೂ ಅರ್ಥ ಆಗೋದಿಲ್ಲ. ಒಂದು ಸತ್ಯ ಸಂಗತಿ ಹೇಳ್ತೀನಿ, ಕೇಳಿ. ನಮ್ಮ ಗೆಳೆಯರೊಬ್ಬರು ಕವಿಗಳು, ಕಾಲೇಜಲ್ಲಿ ಪ್ರೊಫೆಸರ್. ನಿವೃತ್ತಿ ಅಂಚಿನಲ್ಲಿದ್ದರು. ಆಗೊಮ್ಮೆ ಯಾಕೋ ಅವರ ಕಾಲೇಜಿಗೆ ಹೋಗಿದ್ದೆ. ವಾಪಸು ಬರೋವಾಗ ಅವರ ಕಾಲೇಜಿನ ಮಕ್ಕಳ